ಅಳತೊಡಗಿದಳು. ಅವಳ ಅಳು ನಿಲ್ಲುವುದಕ್ಕೆ ಸ್ವಲ್ಪ ಹೊತ್ತು ಬೇಕಾಯಿತು.

ಸುಕೃತಿ ಅಳು ತಡೆಹಿಡಿದಂತೆ ಅನಿಸಿದಾಗ, ಅಭಿ, 'ನಾನು ಚೆನ್ನೈಗೆ ಹೊರಟಿದ್ದೇನೆ. ಸುಕೃತಿ, ಮನೆಯ ದಾರಿ ಹೇಳು' ಎಂದ ಅಭಿ.

'ಮನೆಯ ದಾರಿ ಹೇಳಲು ಕಷ್ಟವಾಗ್ತದೆ ಅಣ್ಣ, ಇದು ಎಗ್ಮೋರ್. ನ್ಯಾಶನಲ್ ಆರ್ಟ್ ಗ್ಯಾಲರಿಗೆ ಹತ್ತಿರ. ಟ್ಯಾಕ್ಸಿ ಮಾಡಿಕೊಂಡು ಎಗ್ಮೋರಿಗೆ ಬಂದು ಎಲ್ಲಿದ್ದಿ ಅಂತ ಫೋನ್ ಮಾಡು. ನಾನೇ ಅಲ್ಲಿಗೆ ಬರುತ್ತೇನೆ. ಇಲ್ಲಿಂದ ದೊಡ್ಡ ದೂರವೇನಲ್ಲ' ಎಂದಳು ಸುಕೃತಿ.

ಅಭಿ ಸುಕೃತಿಯ ಜೊತೆಯಲ್ಲಿ ಅವಳ ಮನೆಗೆ ಬಂದ. ಅಲ್ಲಿಯ ತನಕ ತನ್ನಲ್ಲಿ ಉಂಟಾಗುತ್ತಿದ್ದ ತಲ್ಲಣವನ್ನು ತಡೆದುಕೊಂಡಿದ್ದ ಸುಕೃತಿ, ಮನೆ ಪ್ರವೇಶಿಸಿದೊಡನೆ, ಭಾವೋದ್ವೇಗದಲ್ಲಿ, ವರ್ಷಗಳ ನಂತರ ಕಂಡ ಅಣ್ಣನನ್ನು ಅಪ್ಪಿಕೊಂಡು ಅತ್ತಳು. ಅಭಿ ಅಪ್ಪನಿಂದ ಕಲಿತ ನಿರ್ಲಿಪ್ತತೆಯಲ್ಲಿ ನಕ್ಕು, 'ಇದೇನು ಸುಕೃತಿ, ನಾನು ನಿನ್ನನ್ನು ಕಾಣದೆ ವರ್ಷ ಎಷ್ಟಾಯಿತು! ನೀನು ಅಳುತ್ತಾ ಸ್ವಾಗತಿಸುತ್ತಿದ್ದೀಯಲ್ಲಾ' ಎಂದ. ಅಷ್ಟರಲ್ಲಿ ಮನೆಯ ಒಳಗಿನಿಂದ ಶಮಿ ಮತ್ತು ಕಾಂತಿ ಹೊರಗೆ ಬಂದರು.

'ಇವರು ಯಾರು?' ಎಂದು ಅಭಿ ನಕ್ಕ. ಮಕ್ಕಳ ಮುಖದಲ್ಲಿಯೂ ನಗು ಮೂಡಿತು. ಅಭಿ ಅವರನ್ನು ಬಾಚಿ ತಬ್ಬಿಕೊಂಡ. ಶಮಿ ಮತ್ತು ಕಾಂತಿ ಒಳಹೋಗಿ ಮಾಮನಿಗೆಂದೇ ಸಿದ್ಧವಾಗಿರಿಸಿದ್ದ ಜೇನು ಹಾಕಿದ ನಿಂಬೆ ಹಣ್ಣಿನ ಶರಬತ್ತನ್ನು ತಂದರು.

ಸ್ವಲ್ಪ ಹೊತ್ತು ಮಾತಿನ ನಂತರ ಸುಕೃತಿ, 'ಅಣ್ಣಾ, ಇದು ನಾನು ಕರುಣಾನಿಧಿಯ ಜೊತೆ ಆರು ವರ್ಷಗಳ ಹಿಂದೆ ಸಾನ್ ಫ್ರಾನ್ಸಿಸ್ಕೊ ಬಿಟ್ಟು ಚೆನ್ನೈಗೆ ಬಂದಾಗ ತೆಗೆದುಕೊಂಡ ಮನೆ. ಇದಕ್ಕೆ ಹಣ ಕೊಟ್ಟದ್ದು ನಾನು. ಆಗ ನನ್ನ ಬಳಿ ಹೆಚ್ಚೇನೂ ಹಣ ಇರಲಿಲ್ಲ. ಅಪ್ಪನನ್ನು ಕೇಳಿ ಪಡೆದೆ. ಮನೆಯನ್ನು ನನ್ನ ಹೆಸರಿನಲ್ಲೇ ಮಾಡಬೇಕೆಂದು ನಾನು ಹಟ ಹಿಡಿದ್ದರಿಂದ ಇದು ನನ್ನ ಹೆಸರಲ್ಲಿ ಆಯಿತು. ನಾನು ಪುನಃ ಸಾನ್‌ಫ್ರಾನ್ಸಿಸ್ಕೋಗೆ ಹೋದಾಗ ಈ ಮನೆಯನ್ನು ಮಾರುವ ಯೋಚನೆ ಮಾಡಿದೆ. ಆಗ ಕರುಣಾನಿಧಿ ಜೊತೆಗೇ ಇದ್ದ. ಕರುಣಾನಿಧಿ ಚೆನ್ನೈಯ ಮನೆ ಮಾರಿದ ಹಣದ ಅರ್ಧಾಂಶ ತನಗೆ ಕೊಡು ಎಂದು ಪೀಡಿಸತೊಡಗಿದ. ನಾನು ಒಪ್ಪಲಿಲ್ಲ. ನನಗೆ ಹೊಡೆದು ಬಡಿದು ತುಂಬಾ ಹಿಂಸೆ ಕೊಟ್ಟ. ಆದರೂ ನಾನು ಬಗ್ಗಲಿಲ್ಲ. ಹೇಗೋ ಡೈವೋರ್ಸ್ ಆಯಿತು. ಈಗಲೂ ನಾನು ಕೆಲಸ ಮಾಡುತ್ತಿರುವುದು ಸಾನ್‌ಫ್ರಾನ್ಸಿಸ್ಕೊದಲ್ಲೇ. ಅಪ್ಪನ ಮತ್ತು ನಿನ್ನ ನೆನಪು ಆಗುತ್ತಾ ಇತ್ತು. ಆದರೆ ಹೇಗೆ ಹೋಗಲಿ, ಹೋಗಿ ನನ್ನ ಬಗ್ಗೆ ಏನು ಮಾತಾಡಲಿ ಎಂಬುದು ಒಂದು ಯೋಚನೆಯಾದರೆ, ಮಕ್ಕಳನ್ನು ಕರೆದುಕೊಂಡು ಹೋಗುವ ತೊಂದರೆಗಳ ಯೋಚನೆ ಇನ್ನೊಂದು. ನನ್ನ ದುಸ್ಥಿತಿಗೆ ನಾನೇ ಕಾರಣ ಅಂತಂದುಕೊಂಡು ನನ್ನವರು ಅಂತ ಯಾರೂ ಇಲ್ಲ ಅಂತನಿಸುತ್ತದೆ.

ಈ ಮನೆಯನ್ನು ಮಾರಬೇಕು ಅಂತ ತೀರ್ಮಾನ ಮಾಡಿ ಗಿರಾಕಿಗಳನ್ನು ಹುಡುಕುತ್ತಾ ಇಲ್ಲಿರುವುದು ಒಂದು ತಿಂಗಳಾಯಿತು. ಮಕ್ಕಳ ಎಜುಕೇಶನಿಗೆ ತೊಂದರೆ ಆಗ್ತಾ ಇದೆ. ಗಿರಾಕಿಗಳು ಮತ್ತು ಮಾರಾಟದ ಏಜೆಂಟರು ಫೋನಿನಲ್ಲಿ ಸತಾಯಿಸುತ್ತಾ ಇರುತ್ತಾರೆ. ಒಳ್ಳೆಯ ಬೆಲೆ ಅಂದರೆ ಹತ್ತಿರ ಹತ್ತಿರ ಒಂದು ಕೋಟಿ ಸಿಗಬೇಕು. ಆದರೆ ಅಷ್ಟು ಸಿಗುತ್ತಿಲ್ಲ. ಏನು ಮಾಡುವುದು ಅಂತ ದಿಕ್ಕೆಟ್ಟ ಸ್ಥಿತಿಯಲ್ಲಿ ಇದ್ದೇನೆ.

'ಮನೆ ಮಾರಾಟ ಮಾಡುವ ವಿಚಾರವನ್ನು ಸದ್ಯಕ್ಕೆ ಬದಿಗಿಡು. ಒಂದು ಕೋಟಿ ಸಿಗಬೇಕು ಎನ್ನುವ ಹಟ ಬಿಡು. ಗಿರಾಕಿಗಳು ಎಷ್ಟಕ್ಕೆ ಕೇಳುತ್ತಿದ್ದಾರೆ?'

'ಗಿರಾಕಿಗಳು ನೇರವಾಗಿ ಸಿಗುವುದಿಲ್ಲ. ಏಜೆಂಟರ ಮೂಲಕವೇ ವ್ಯವಹರಿಸಬೇಕಾಗಿದೆ. ಎಂಬತ್ತು ಲಕ್ಷಕ್ಕೆ ಒಬ್ಬರು ಕೇಳುತ್ತಿದ್ದಾರೆ'

'ಕೊಟ್ಟು ಬಿಡು ಎಂಬತ್ತು ಲಕ್ಷಕ್ಕೆ. ಸಾಕು. ಒಂದು ಕೋಟಿ ಸಿಗಬೇಕೆಂದು ನೀನು ಮಕ್ಕಳ ಜೊತೆ ಅಲ್ಲೇ ಇರುವುದು ಸೇಫ್ ಅಲ್ಲ. ಈ ದಿನಗಳಲ್ಲಿ ಹಣಕ್ಕಾಗಿ ಮನುಷ್ಯರು ಏನೆಲ್ಲ ಮಾಡುತ್ತಾರೆ ಎಂದು ನಾನು ನಿನಗೆ ಹೇಳಬೇಕಾಗಿಲ್ಲ. ಹಣಕ್ಕಿಂತ ಜೀವ ದೊಡ್ಡದು; ನಿನ್ನದು ಮಾತ್ರವಲ್ಲ, ನಿನ್ನ ಮಕ್ಕಳದೂ ಕೂಡ. ಒಬ್ಬ ದುರಾತ್ಮ ಮನಸ್ಸು ಮಾಡಿದರೆ, ನಿನ್ನಲ್ಲಿರುವುದೆಲ್ಲವನ್ನೂ ಕಿತ್ತುಕೊಳ್ಳಬಹುದು; ಅಷ್ಟೇ ಅಲ್ಲ, ಅವನಿಗೆ ಏನೆಲ್ಲಾ ದುಷ್ಟ ಯೋಚನೆಗಳು ಬರುತ್ತವೋ ಅದನ್ನು ಕೂಡ ಮಾಡಬಹುದು. ನಿನಗೆ ಎಷ್ಟು ಹಣ ಬೇಕೋ ಅಷ್ಟು ನಾನು ಕೊಡ್ತೇನೆ. ಬ್ಯಾಂಕಿನ ನಿನ್ನ ಅಕೌಂಟಿನಲ್ಲಿರುವ ಹಣ ಯಾರೂ ಮುಟ್ಟಲಾರರು ಎಂದು ತಿಳಿಯಬೇಡ. ಬಲಾತ್ಕಾರವಾಗಿ ಅದನ್ನು ನಿನ್ನಿಂದಲೇ ಅಪಹರಿಸಲು ಸಾಧ್ಯವಿದೆ. ನೀನು ಚೆನ್ನೈ ಬಿಟ್ಟು ಆನೆಮಹಲಿಗೆ ಬರಲು ಸಿದ್ಧಳಾಗು. ಎಲ್ಲಾ ಯೋಚನೆಯನ್ನು ಬಿಟ್ಟು ನಿಶ್ಚಿಂತೆಯಿಂದ ಇರು. ಯೋಚಿಸಬೇಡ. ನಿನ್ನ ಬಳಿ ಹಣವೇ ಇಲ್ಲದಿದ್ದರೂ ನೀನು ಬದುಕಿರುವಷ್ಟು ಕಾಲ, ತಂಗಿಯಂತೆ ಅಲ್ಲ, ಮಗಳಂತೆ ನಿನ್ನನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನದು' ಎಂದು ಅಭಿ, 'ನಿನ್ನ ಮನೆ ಮತ್ತು ಕಾರು ಮಾರಿದ ಹಣ ಇನ್ನು ಎರಡು ದಿನಗಳಲ್ಲಿ ನಿನ್ನ ಕೈಗೆ ಬರುವಂತೆ ಮಾಡುವುದು ಹೇಗೆ ಎಂದು ನಾನು ಹೇಳುತ್ತೇನೆ, ಕೇಳು: ಮನೆ ಕೊಳ್ಳಲು ಮತ್ತು ಕಾರು ಕೊಳ್ಳಲು ಸಿದ್ಧರಿರುವ ಇಬ್ಬರು ಗಿರಾಕಿಗಳಿಗೂ ನೀನು ಈಗಲೇ ಫೋನು ಮಾಡಿ, ನೀವು ಕೊಂಡುಕೊಳ್ಳಲು ಒಪ್ಪಿದ ಹಣವನ್ನು ನನಗೆ ಬ್ಯಾಂಕ್ ಡ್ರಾಫ್ಟ್ ಮೂಲಕ ಕೊಡಿ. ಕ್ಯಾಶ್ ಅಥವಾ ಆನ್‌ಲೈನ್ ಪೇಮೆಂಟ್ ಬೇಡ. ಇನ್ನು ಮೂರು ದಿನಗಳ ಒಳಗೆ ನಾನು ಬರುತ್ತೇನೆ. ಡ್ರಾಫ್ಟ್ ಮತ್ತು ನನ್ನ ಸಹಿ ಬೇಕಾದಲ್ಲಿ ಸಹಿ ಮಾಡಬೇಕಾದ ಕಾಗದ ಪತ್ರಗಳನ್ನು ರೆಡಿ ಮಾಡಿ ಇಡಿ. ನಾನು ಮತ್ತು ನನ್ನ ಅಣ್ಣ ಬರುತ್ತೇವೆ. ಬರುವ ಮೊದಲು ಫೋನು ಮಾಡುತ್ತೇವೆ ಎಂದು ಹೇಳು' ಎಂದ.

ಸ್ವಲ್ಪ ಯೋಚಿಸಿ ಅಭಿ, 'ಈಗ ಕಾರು ಶೆಡ್ಡಿನಲ್ಲಿಟ್ಟು ಬೀಗ ಹಾಕು. ಡ್ರಾಫ್ಟ್ ತೆಗೆದುಕೊಂಡು ನಾವು ಹೋಗಲು ಚೆನ್ನೈಯಿಂದ ಹೊರಡುವಾಗ ಕಾರು ಕೊಂಡವರಿಗೆ ಬೀಗದ ಕೈ ಕೊಟ್ಟರಾಯಿತು. ನಾಳೆ ಅಥವಾ ನಾಡದ್ದು ನಾವು ಇಲ್ಲಿಂದ ಹೊರಡೋಣ. ಈಗಲೇ ನೀನು ಶಮಿ ಮತ್ತು ಕಾಂತಿಗೆ ಹೇಳು ನಾವು

## ಇಲ್ಲಿಯವರೆಗೆ



ಅಭಿ ತನ್ನ ತಂದೆ ನರಹರಿಯನ್ನು ಹುಡುಕುತ್ತಲೇ ಇದ್ದ. ಹಾಗೆ ಹುಡುಕುವಾಗ ಗಂಗಾನದಿಯಲ್ಲಿ ಸ್ನಾನ ಮಾಡಿ ದಂಡೆಗೆ ಬಂದು ಒದ್ದೆ ಬಟ್ಟೆ ಬದಲಾಯಿಸಿ ಒಣಗಿದ ಬಟ್ಟೆಯನ್ನು ತೊಡುತ್ತಿದ್ದ ವ್ಯಕ್ತಿಯನ್ನು ಕಂಡ. ಹತ್ತಿರ ಹೋದಾಗ ತಂದೆಯ ಚೆಹರೆಯನ್ನೇ ಹೋಲುತ್ತಿದ್ದ ಕಾರಣ ದಿಟ್ಟಿಸಿ ನೋಡಿದ. ಬಿಳಿಗಡ್ಡ, ನರೆತ ಕೂದಲ ವ್ಯಕ್ತಿ ತಂದೆಯೇ ಎಂದಾಗ ಅಭಿಗೆ ನಂಬಲಾಗಲಿಲ್ಲ. ಅಪ್ಪನಿಗೂ ಅಭಿಯನ್ನು ನೋಡಿದಾಗ ಅಚ್ಚರಿ. ಇಬ್ಬರೂ ಹಾಗೆಯೇ ನಿಂತುಬಿಡುತ್ತಾರೆ. ಆಮೇಲೆ ಪ್ರೀತಿಯಿಂದ ತಬ್ಬಿಕೊಳ್ಳುತ್ತಾರೆ. 'ನಾನು ಮನೆ ಬಿಟ್ಟು ಬಂದಿರುವುದು ಕೊನೆಯುಸಿರನ್ನು ಇಲ್ಲಿಯೇ ಎಳೆಯಬೇಕೆಂದು' ಎಂದು ನರಹರಿ ಹೇಳುವಾಗ ಅಭಿ ದುಃಖಿಸುತ್ತಾನೆ. ಬಳಿಕ ಅಪ್ಪ ನಾವು ಸಾಯಬೇಕು ಎಂದು ಬಯಸಬಾರದು. ಜೀವನದಲ್ಲಿ ಸುಖವನ್ನೇ ಉಣ್ಣದಿದ್ದರೂ ಸಾವು ಎಂಬ ಘೋರ ಪಾತಕ ಕೃತ್ಯದತ್ತ ಮನಸ್ಸು ಹರಿಸಬಾರದು ಎಂದು ಅಭಿ ತಂದೆಗೆ ಹೇಳುತ್ತಾನೆ. ಹೇಗೋ ಅಪ್ಪನನ್ನು ಒಪ್ಪಿಸಿ ಅಭಿ ಮಂಗಳೂರಿಗೆ ರೈಲಿಗೆ ಬಂದು ಅಲ್ಲಿಂದ ಬಸ್ಸು ಹಿಡಿದು ಸಕಲೇಶಪುರಕ್ಕೆ ಬರುತ್ತಾರೆ. ಅಲ್ಲಿಂದ ಆನೆಮಹಲಿಗೆ ಬಂದಾಗ ಮನೆಯಲ್ಲಿ ಬಾಗಿಲಿಗೆ ಬೀಗ ಹಾಕಿರುವುದು ಜತೆಗೆ ಜಾಗ ಮಾರಾಟಕ್ಕಿದೆ ಎಂಬ ಚೀಟಿ ಅಂಟಿಸಿರುವುದು ಕಾಣಿಸುತ್ತದೆ. ಕೆಲಸದ ಆಳು ನಡೆದ ವೃತ್ತಾಂತವನ್ನು ತಿಳಿಸುತ್ತಾನೆ.